**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ:68/9(2):ಆರ್‌ಆರ್‌ಸಿ:15

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:15-6-2016

## ಮರು ತಿದ್ದುಪಡಿ ಆದೇಶ

ವಿಷಯ: ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೇತರ ಲೆಕ್ಕ ಶೀರ್ಷಿಕೆ-3054ರಡಿ ಗದಗ ಜಿಲ್ಲೆ ಶಿರಹಟ್ಟಿ ತಾಲ್ಲೂಕಿನ ಶಿಗ್ಲಿ ಗ್ರಾಮದ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಹೊರಡಿಸಿದ ತಿದ್ದುಪಡಿ ಆದೇಶಕ್ಕೆ ಮರು ತಿದ್ದುಪಡಿ ಮಾಡುವ ಬಗ್ಗೆ..

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:68/9:ಆರ್‌ಆರ್‌ಸಿ:15 ದಿ:18-9-2015
2. ತಿದ್ದುಪಡಿ ಆದೇಶ ಸಂಖ್ಯೆ:ಗ್ರಾಅಪ:68/9(1):ಆರ್‌ಆರ್‌ಸಿ:2015 ದಿನಾಂಕ:18-9-2015

ಲೆಕ್ಕಶೀರ್ಷಿಕೆ-3054-80-196-1-01-300 (ಯೋಜನೇತರ) ಅಡಿ ಉಲ್ಲೇಖ-1ರ ಸರ್ಕಾರದ ಆದೇಶದಲ್ಲಿ ಗದಗ ಜಿಲ್ಲೆ ಶಿರಹಟ್ಟಿ ತಾಲ್ಲೂಕಿನ ಶಿಗ್ಲಿ ಗ್ರಾಮದ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.100.00 ಲಕ್ಷ ಅನುದಾನ ಹಂಚಿಕೆ ಮಾಡಿದ್ದು, ತಿದ್ದುಪಡಿ ಸಂಖ್ಯೆ:ಗ್ರಾಅಪ:68/9(1):ಆರ್‌ಆರ್‌ಸಿ:2015 ದಿನಾಂಕ:18-9-2015ರಲ್ಲಿ ರೂ.100.00 ಲಕ್ಷಗಳ ಮಿತಿಯೊಳಗೆ 4 ಕಾಮಗಾರಿಗಳನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿದೆ. ಸದರಿ ಕಾಮಗಾರಿಗಳ ಪೈಕಿ ಕ್ರಮ ಸಂಖ್ಯೆ:4ರಲ್ಲಿ ಕಲಿವಾಳ ಕ್ರಾಸ್ ಹೆಸರೂರು ವರೆಗೆ 3.00 ಕಿ.ಮೀ. ರಸ್ತೆ ಅಭಿವೃದ್ಧಿಯನ್ನು ಕೈಗೊಳ್ಳಲು ಸೂಚಿಸಿದ್ದು, ಈ ರಸ್ತೆಯು ಹಾವೇರಿ ಜಿಲ್ಲೆ ಸವಣೂರು ತಾಲ್ಲೂಕಿನ ವ್ಯಾಪ್ತಿಯಲ್ಲಿರುವುದರಿಂದ ಕೆಳಕಂಡಂತೆ ಅನುದಾನ ಹಂಚಿಕೆ ಮಾಡಿ ಮರು ತಿದ್ದುಪಡಿ ಆದೇಶ ಹೊರಡಿಸಿದೆ.

| ಕ್ರಸಂ | ಜಿಲ್ಲೆ/ತಾಲ್ಲೂಕು | ಕಾಮಗಾರಿಯ ಹೆಸರು | ಹಂಚಿಕೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಗದಗ/ಶಿರಹಟ್ಟಿ | ಶಿಗ್ಲಿ ಗ್ರಾಮದಿಂದ ಹೂವಿನಶಿಗ್ಲಿ ಗ್ರಾಮ ರಸ್ತೆ 2.00 ಕಿ.ಮೀ. | 75.00 |
| 2 | | ಶಿಗ್ಲಿ ಗ್ರಾಮದಿಂದ ಬಸವನಕೊಪ್ಪ ಗ್ರಾಮ ರಸ್ತೆ 2.50 ಕಿ.ಮೀ. | |
| 3 | | ಶಿಗ್ಲಿ ಗ್ರಾಮದಿಂದ ಹೆಸರೂರ ರಸ್ತೆ 2.00 ಕಿ.ಮೀ. | |
| 4 | ಹಾವೇರಿ/ಸವಣೂರು | ಕಲಿವಾಳ ಕ್ರಾಸ್ ಹೆಸರೂರ 3.00 ಕಿ.ಮೀ. | 25.00 |

ಅದರಂತೆ, ಮೇಲ್ಕಂಡ ರಸ್ತೆ ಕಾಮಗಾರಿಗಳನ್ನು ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳಿಂದ ಹಂಚಿಕೆ ಮಾಡಿದ ಅನುದಾನದ ಮಿತಿಯಲ್ಲಿ ಅನುಷ್ಠಾನಗೊಳಿಸತಕ್ಕದ್ದು. ಉಳಿದಂತೆ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು:

1. ಮಹಾಲೇಖಪಾಲರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.